ಬಿತ್ತಿಸಲು ಬಂಡೆಪ್ಪ ಬಂದಿದ್ದ. ಆತ ಬಂದನೆಂದರೆ ಅಚ್ಚಕ್ಕನಿಗೆ ರೆಕ್ಕೆ ಮೂಡಿದಂತೆಯೇ ಸರಿ. ಅಣ್ಣಾರಾಯ ದೇಶಾಂತರ ಹೋದಮೇಲೆ ಅಚ್ಚಕ್ಕ ಹೊಟ್ಟೆಗಾಗಿ ಯೋಚಿಸಿದವಳೇ ವಿನಃ ಗಂಡನಿಗಾಗಿ ಅಲ್ಲ. ಆದರೀಗ ಬಂಡೆಪ್ಪನ ನೆರಳಲ್ಲಿ ಅವಳಿಗೆ ಜೀವನದ ಯೋಚನೆ ಇಲ್ಲ. ಸುಬ್ಬಿ ಹದಿನೆಂಟಕ್ಕೆ ಬಂದ ಹುಡುಗಿ, ಗೋಪಣ್ಣ ಬಂಡೆಪ್ಪನ ಕೃಪೆಯಿಂದ ನಗರದಲ್ಲಿ ಓದುತ್ತಿದ್ದಾನೆ, ವರ್ಷದ ಓದು ಮೂರು ವರ್ಷಕ್ಕೆ ಮಾಡುತ್ತ.

ಈಗೀಗ ಬಂಡೂಮಾಮ ಬಂದರೆ, ಸುಬ್ಬಿಯ ಮನಸ್ಸು ದೇಹ ಹಿಡಿಯಂತೆ ಕುಗ್ಗುತ್ತದೆ. ಅವನ ಕಣ್ಣುಗಳು ತನ್ನ ಎದೆಯನ್ನು, ಮೈಯನ್ನು ಹರಿದು ತಿನ್ನುವಂತೆ ನೋಡಿದಾಗ ಅಂದು ಎಳವೆಯಲ್ಲಿದ್ದಾಗ ಬಂಡೆಪ್ಪ ಹುಸೇನಿಯ ತೆಕ್ಕೆಬಿದ್ದ ದೇಹಗಳ ನೆನಪಾಗಿ. ಅದೇ ಅಸಹ್ಯ ಭಾವನೆಗಳು ಮೂಡುತ್ತವೆ. ಆದರೆ ಯಾರ ಎದುರಿಗೆ ಅನ್ನುವ ಧೈರ್ಯವಿಲ್ಲ.

ಅಚ್ಚಕ್ಕನಿಗಂತೂ ತಮ್ಮ ಬಂದರೆ ಕಣ್ಣುಗಳು ನೆತ್ತಿಯ ಮೇಲೆ ಅಡಗುತ್ತವೆ.

ಆದರೆ ಈಗೀಗ ಬಂಡೂಮಾಮ ಮೊದಲಿನಂತೆ ಹುಸೇನಿಯ ಮನೆಗೆ ಹೋಗುವುದಿಲ್ಲ. ಹುಸೇನಿ ಮಾತ್ರ ಬಿಡುತ್ತಿರಲಿಲ್ಲ. ಇವನು ಬಂದ ಸುಳಿವು ಗೊತ್ತಾದರೆ ಹುಸೇನಿಯ ಮಗಳು ಬಂದು ಬಾಗಿಲಿಗೆ ನಿಲ್ಲುತ್ತಿದ್ದಳು. 'ಬಾಣಗದಿನ್ನಿಯಿಂದ ಅಪ್ಪಾ ಅವರು ಬಂದಾರೇನ್ರಿ... ಅವ್ವ... ಕರ‍್ಯಾಕ ಕಳಸ್ಯಾಳ' ಎಂದು ಕರೆ ಬಂದಾಗ ಮಾತ್ರ ಬಂಡೂಮಾಮ ಕಾಲೆಳೆದುಕೊಂಡು ಹೋಗುತ್ತಿದ್ದ. ತಮ್ಮನ ಈ ನಡತೆಗೆ ಅಚ್ಚಕ್ಕ ಬೈಯ್ದು ಹೇಳಿದ್ದಳು,

'ಹಿಂಗ ಜೀವನಾ ಹಾಳು ಮಾಡಿಕೊಂಡರ ಹ್ಯಾಂಗ ನೋಡು ಬಂಡ್ಯಾ... ಒಂದು ಮದುವ್ಯರ ಆಗೂ, ನಿಂದು ಅಂತ ಒಂದು ಸಂಸಾರ ಆಗ್ತದ. ಹೊಟ್ಟೆ, ನೆತ್ತಿ ನೋಡು ಹೇಣ್ತಿ ಇರ‍್ತಾಳ' ಬೇರೆ ಘಳಿಗೆ ಆಗಿದ್ದರೇ... ಅಚ್ಚಕ್ಕನ ಮಾತುಗಳೆಂದೂ ಬಂಡೂಮಾಮನಿಗೆ ತಾಗುವಂತಹದ್ದಲ್ಲ. ಅವನ ಪಾಲಿಗೆ ಸತ್ವವಿಲ್ಲದ, ಅರ್ಥಹೀನ ಮಾತುಗಳವು. ನೀಲಿ, ಹುಸೇನಿ, ಗುಲಾಬಿಯಂಥವರ ಮೈಯ ಸುಖದಲ್ಲಿ ಬಂಡೆಪ್ಪನಿಗೆ ಮದುವೆಗೋಜು ಇರಲಿಲ್ಲ. ಆದರೀಗ ಅಚ್ಚಕ್ಕನ ಮಾತಿಗೆ ಬಂಡೆಪ್ಪನಿಗೆ ತನ್ನ ಮನಸ್ಸಿನಲ್ಲಿದ್ದ ಮಾತು ಸುಸೂತ್ರವಾಗಿ ಹೊರಬಂತು. ಅಚ್ಚಕ್ಕನ ಮಾತಿನ ಮೂಲವನ್ನು ಹಿಡಿದೇ ಬಂಡೆಪ್ಪ ಹೇಳಿದ್ದುಂಟು.

'ನೀ ಅನ್ನೂದು ಖರೇ ಅಚ್ಚಕ್ಕ... ಇಷ್ಟು ಆಸ್ತಿ ಆದ, ನಿನ್ನ ತಮ್ಮನ, ತವರಮನಿ ವಂಶ ಬೆಳೀಬೇಕು ನಾ ಮದುವಿ ಆಗಬೇಕು ಅಂತ ನಿನಗೂ ಅಂತಃಕರಣ ಇದ್ರ ಸುಬ್ಬಿನ ಕೊಡ್ತಿಯೇನು?'

ಬಂಡೆಪ್ಪನ ಮಾತುಗಳು ಅರ್ಥವಾಗಲೇ ಇಲ್ಲವೇನೋ ಎನ್ನುವಂತೆ ಅಚ್ಚಕ್ಕ ಕಣ್ಣು ಕಣ್ಣು ಬಿಟ್ಟಳು.

'ಇದೇನೋ ಬಂಡ್ಯಾ, ಸುಬ್ಬಿ ಇನ್ನ... ಕೂಸು... ನಾಳೆ ಕಾರ್ತಿಕಕ್ಕ–ಹದಿನೇಳು ತುಂಬ್ತಾವ... ನಿನಗ ಮೊನ್ನಿ ಕಾರಹುಣ್ಣಿಮಿಗಿ ನಲವತ್ಮೂರು. ಅದು... ವಿಚಾರ ಮಾಡು...' ಇಷ್ಟು ಹೇಳಿದರೂ ಪರಿಸ್ಥಿತಿಯಿಂದ ನುಣುಚಿಕೊಳ್ಳುವ ಧೈರ್ಯ ಅಚ್ಚಕ್ಕನಲ್ಲಿಲ್ಲ. ಯಾಕೆಂದರೆ ಅಣ್ಣಾರಾಯ ದೇಶಾಂತರಕ್ಕೆ ಹೋದಲಾಗಾಯ್ತು, ಮನೆಯ ಬದುಕಿನ ರಥ ಎಳೆಯುತ್ತಿದ್ದವನೇ ಆತ. ಅವನಿಲ್ಲದಿದ್ದರೆ ತಾನು ತನ್ನ ಮಕ್ಕಳು ಬೇವೂರಿನ ನದಿಗೆ ಬೀಳಬೇಕಾಗುತ್ತಿತ್ತೇನೊ?

'ಅಚ್ಚಕ್ಕ ಯಾಕ ಅನುಮಾನಿಸ್ತಿ, ನಿನ್ನ ಛಲೋದಕ್ಕ ನಾ ಹೇಳ್ತೀನಿ, ಗೋಪ್ಯಾನ ಜವಾಬ್ದಾರಿ ಆದ; ಸಾಯೂ ತನಕಾ ನಿನ್ನ  ಜೀವಮಾನದ ಗತಿ ಏನು? ಇನ್ನ ಸುಬ್ಬಿದ ತಗೋ ಹೊರಗ ರೊಕ್ಕಾ ಕೊಟ್ಟು ಮದುವಿ ಮಾಡುವಷ್ಟು ರೊಕ್ಕ ಆದ ಏನ ನಿನಗ. ಹೊಟ್ಟಿ ತುಂಬಿಕೊಂಡೆನೆಂದ್ರ